27-2-70

Regd No B G 182

February 1970. ಫೆಬ್ರವರಿ

ಗೋ ಮಾತಾಕೀ ಜೈ

ಗೋರಕ್ಷಣ
GORAKSHANA

"ಗೋರಕ್ಷಣಕ್ಕೆ ವಾರ್ಷಿಕಚಂದಾ (ಅಂಚೇಮೂಲಕ) 60 ಪೈಸೆ ಅನೇಕ ಪ್ರತಿಗಳು ಉಚಿತವಾಗಿ ಹಂಚಲಾಗುತ್ತಿದೆ

ಭಾರತದ ಆದ್ಯಂತ ಗೋವಧೆಯು ಶಾಸನಬದ್ಧವಾಗಿ ನಿಷೇಧವಾಗಲಿ

Cow Sl ug ter should be banned immediately

Please help in every way

This Humanitarian Propaganda Paper

★

ಗೋರಕ್ಷಣ, ಅಹಿಂಸಾ ಪ್ರಚಾರ ಪತ್ರಿಕೆ

ವಿನಂತಿ– ಸಕಲ ರೀತಿಯಲ್ಲೂ ನೆರವುನೀಡಿ

20 ನೇ ವರ್ಷ

ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್

ಬಿಡಿ ಪ್ರತಿ 2 ಪೈಸೆ

❁ Cow Slaughter should be banned immediately ❁

Vinobaji's noble sayings

"May God grant us the strength and spirit to serve our dumb animals, whose care and responsibility our culture has undertaken as a duty. May he give us the strength to sacrifice for their sake is my prayer. Sacrifice does not mean a fast but going door to door seeking help for Gorakshan and starting Gosadans."

★

Sant Tukroji's Suggestion

Sant Tukroji has suggested that if the Government was sincere at all in the protection of the cows and her species, it could like other taxes impose a new tax and thereby create a Dham-Fund which could rapidly swell into crores of Rupees in a country where cow is worshipped like a mother: and such funds could have been adequately utilised for the preservation and maintenence of dry cows and such cattle which the farmers found uneconomical.

★

Sri Morarji Vasa's opinion

To earn rupees thirty crores foreign exchange we slaughtet one crore cows every year. Against this, I request the committee to enquire from the Government the cost in foreign exchange of milk powde. for the last ten years.

ಪಕ್ಷಿಗಳು

ವಿಶ್ವದಲ್ಲಿ 28000 ಕ್ಕೂ ಹೆಚ್ಚು ವಿಧದ ಪಕ್ಷಿಗಳಿರುವವೆಂದು ಕೆಲವರ ನಂಬಿಕೆ: ಅಮೇರಿಕಾದ ಸ್ಮಿತ್ಸೋನಿಯರ್ ಸಂಸ್ಥೆಯು 8500 ಎಂದು ಹೇಳಿದೆ: ಅದರಲ್ಲಿ 1600 ಅಮೇರಿಕಾದಲ್ಲಿ ಕಾಣಬಹುದು.

○

ಭಾರತದ ಸಸ್ಯಾಹಾರಿಗಳು

ಭಾರತದ ಯಾವ ಯಾವ ರಾಜ್ಯದಲ್ಲಿ ಎಷ್ಟೆಷ್ಟು ಜನ ಸಸ್ಯಾಹಾರಿಗಳಿದ್ದಾರೆ ಎಂಬುದನ್ನು ರಾಷ್ಟ್ರೀಯ ಆಹಾರ ಸಂಶೋಧನಾ ಸಂಸ್ಥೆ ಹೀಗೆ ತಿಳಿಸಿದೆ—

ಮೈಸೂರು	ಶೇ 8
ಅಸ್ಸಾಂ, ಬಂಗಾಳ, ಒರಿಸ್ಸಾ	ಶೇ 5
ಆಂಧ್ರ	ಶೇ 10
ತಮಿಳುನಾಡು	ಶೇ 15
ಕಾಶ್ಮೀರ	ಶೇ 18
ಬೀಹಾರ್	ಶೇ 22
ಕೇರಳ	ಶೇ 28
ಮಹಾರಾಷ್ಟ್ರ	ಶೇ 32
ಮಧ್ಯಪ್ರದೇಶ	ಶೇ 45
ಪಂಜಾಬು	ಶೇ 50
ಉತ್ತರ ಪ್ರದೇಶ	ಶೇ 48
ಗುಜರಾತ್	ಶೇ 60
ರಾಜಸ್ಥಾನ್	ಶೇ 26

○

ಹೆಚ್ಚು ಹಾಲು ದೊರೆಯಲು

ದೇಶದ ಆಹಾರ ಪೂರೈಕೆಯಲ್ಲಿ ಹಾಲು ಬೆಣ್ಣೆ, ಮೊಟ್ಟೆ, ಮಾಂಸ, ಇವು ಪತ್ಯಯ ತವಾದ ಮತ್ತು ಮಾನವನ ಜೀವನಕ್ಕೆಗೆ ಅತ್ಯಗತ್ಯವಾದವು ಈ ಕಾರಣದಿಂದ ನಮ್ಮ ರಾಜ್ಯದ ರಾಸುಗಳು ಹೆಚ್ಚು ಹಾಲು ಕೊಡುವ ಹಾಗೆ ತಳಿ ಅಭಿವೃದ್ಧಿ ಮಾಡುವುದು ಈ ದೆಸೆಯಲ್ಲಿ ಬಹು ಮುಖ್ಯ : ಆದ್ದರಿಂದಲೇ ನಮ್ಮ ರಾಜ್ಯದಲ್ಲಿ ಶೀಘ್ರಗತಿಯಲ್ಲಿ ಮಿಶ್ರ ತಳಿಯ ಪ್ರಯೋಗವು ನಡೆಯುತ್ತಿದ್ದು ಫಲದಾಯಕವಾಗಿ ಕಂಡು ಬರುತ್ತಿದೆ. [ಜನಪದ]

ಗೋ ಮಹಿಮೆ

ಸಗಣಿಯನ್ನು ಶ್ರೇಷ್ಠವಾದ ಗೊಬ್ಬರ ವೆಂದು ನಮ್ಮ ದೇಶದಲ್ಲಿ ರೈತರು ಹೊಲ ಗದ್ದೆ ತೋಟಗಳಿಗೆ ಹಾಕಿ ಹೆಚ್ಚು ಬೆಳೆಯನ್ನು ಬೆಳೆಯುವರು. ಈ ಗೊಬ್ಬರದಿಂದ ಬೆಳೆದ ಬೆಳಸು ಆಹಾರಕ್ಕೆ ತುಂಬಾ ಒಳ್ಳೆಯದು. ಕಾಳುಕಡ್ಡಿಗಳಲ್ಲಿ ಒಳ್ಳೆ ಶಕ್ತಿವರ್ಧಕ ವಸ್ತುಗಳಿದ್ದು ಮೇಲಾದ ಆಹಾರವಾಗುವುದು ಕೃತಕ ಗೊಬ್ಬರದಿಂದ ಬೆಳಸು ಕೆಡಿಬಹುದು, ಅಥವಾ ಪೈರುಗಳಿಗೆ ಹುಳು ಬೀಳಬಹುದು. ಆಗ ಹುಳುಗಳ ನಾಶಕ್ಕೆ ವಿಷಪೂರಿತ ಔಷಧಗಳನ್ನು ಚಿಮುಕಿಸಬೇಕು ; ಅದು ಬಲಿಯುವ ಕಾಳುಕಡ್ಡಿಗಳಿಗೆ ಸೇರಿ, ಅಂತಃ ಆಹಾರವನ್ನು ತಿನ್ನುವ ನಮಗೆ ಕಾಲಕ್ರಮೇಣ ಅನೇಕ ರೋಗಗಳು ಹುಟ್ಟಿ ನಮಗೆ ತೊಂದರೆಯಾಗುವುದು ; ಅದರಿಂದ ನಮ್ಮ ದೇಶದ ಭೂಮಿಗೆ ಅನಾದಿ ಕಾಲದಿಂದಲೂ ದನಕರುಗಳ ಗೊಬ್ಬರವೇ ಹೆಚ್ಚು ಬಳಕೆಯಲ್ಲಿದೆ.

ಹಸು ಸತ್ತಮೇಲೂ ನಮಗೆ ಉಪಕಾರ ಮಾಡುವುದು. ಹೇಗೆಂದರೆ ಅದರ ಚರ್ಮದಿಂದ ಕೈಚೀಲ; ಎಕ್ಕಡ, ತಿದಿ, ಹರಿಗೋಲು, ನಗಾರಿ, ಭೇರಿ, ಮುಂತಾದ ವಾದ್ಯದ ಪದಾರ್ಥಗಳೂ ಆಗುತ್ತವೆ. ಕೆಲವರು ರಾಜಸ ತಾಮಸರು ಇದ್ದಾಗಲೂ ಸತ್ತ ಮೇಲೂ ಇದರ ಮಾಂಸವನ್ನು ಆಹಾರವಾಗಿಯೂ ಉಪಯೋಗಿಸುತ್ತಾರೆ. ಇದರ ಕೊಂಬು ಗೆಕಿರಸುಗಳಿಂದ ಭರಣಿ, ಬಾಚಣಿಗೆ, ಗುಂಡಿ ಮುಂತಾದ ಪದಾರ್ಥಗಳನ್ನು ತಯಾರ್ಮಾಡಬಹದು. ಹೀಗಿರುವಾಗಿ ಗೋವು ಎಲ್ಲರಿಗೂ ಭೂಲೋಕದಲ್ಲಿ ತಾಯಾಗಿದೆ. ಗೋಹತ್ಯವು ಘೋರ ಪಾಪವು. ಹಿಂದೂಗಳ ಜೀವರಾದ ಗೋವನ್ನು ಸೇವೆಮಾಡಿದರೆ ಸುಖವಾಗುವುದು.

ಬಿ. ಜಿ. ಶಾಸ್ತ್ರಿ,
ಆಥರ್, ಅಸ್ಪ್ರಾಲಜರ್

ಮುಖ್ಯ ಮಂತ್ರಿಗಳು ತ್ಯಾಗಕ್ಕೆ ಸಿದ್ಧ

ಬೆಂಗಳೂರು — ಆವೇಶಪೂರಿತವಾದ ಶಾಸನಸಭೆಯಲ್ಲಿ ಬುಧವಾರ, ಮೈಸೂರು ಮಹಾರಾಷ್ಟ್ರ ಗಡಿ ಸಮಸ್ಯೆ ಬಗ್ಗೆ, ಪ್ರಶ್ನೆಗಳಿಗೆ ಉತ್ತರಕೊಡುತ್ತಾ, ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು, ತಮ್ಮ ತ್ಯಾಗದಿಂದ ಕರ್ನಾಟಕದ ಹಿತ ಸಾಧನೆಯಾಗುವುದಾದರೆ ತಮ್ಮ ಅಧಿಕಾರ ತ್ಯಜಿಸಲು ತಾವು ಸಿದ್ಧವೆಂದು ಹೇಳಿದಾಗ, ಸಭೆಯರ್ಘೋದ್ಗಾರವಾಯಿತು.

★

ಶ್ರೀ ವೆಂಕಟೇಶ್ವರಸ್ವಾಮಿಗೆ

ತಿರುಪತಿ— ಶ್ರೀ ವೆಂಕಟೇಶ್ವರ ಸ್ವಾಮಿಗೆ ಕರ್ಣಪತ್ರಗಳನ್ನೂ ಗಟಿಕಹಸ್ತವನ್ನೂ ವಜ್ರಗಳಲ್ಲಿ ತಯಾರಿಸಲಾಗುವುದೆಂದು ತಿಳಿಸಲಾಗಿದೆ.

★

ಸರ್ವೇಶ್ವರನ ವಚನಗಳು

ಅವಿವೇಕಿಗಳಿಗೆ ಬೋಧಿಸುವುದು
ಮೂರ್ಖರಿಗೆ ಬುದ್ಧಿ ಹೇಳುವುದು
ಶೂನ್ಯಕ್ಕೆ ಗುಂಡುಹೊಡೆದಂತೆ ಸರ್ವೇಶ್ವರ.

[ಕ. ನು] ಡಿ. ಲಿಂಗಯ್ಯ

★

ವಿಶ್ವದಲ್ಲಿ ಪಶುಸಂಖ್ಯೆ

ವಿಶ್ವದಲ್ಲಿ ಈಗ ಹಿಂದಿಗಿಂತ ಪಶುಸಂಖೆ ಹೆಚ್ಚಿದೆ. 1140000000 ಪಶುಗಳಿವೆ ಎಂದು ಅಂದಾಜುಮಾಡಲಾಗಿದೆ. ಇದು ಕಳೆದ ವರ್ಷಕ್ಕಿಂತ ಶೇಕಡ 1 ಹೆಚ್ಚು ಮತ್ತು 56-60 ಕ್ಕಿಂತ ಶೇಕಡ 17 ಹೆಚ್ಚು ಎಂದು ಸೆಪ್ಟಂಬರು 67 ರಲ್ಲಿ ಅಂತರ ರಾಷ್ಟ್ರೀಯ ವ್ಯವಸಾಯೋತ್ಪನ್ನಗಾರರ ಸಂಘ ಪ್ರಕಟಿಸಿದೆ.

★ ಒಳ್ಳೆಯ ಹಾಲನ್ನು ಪಡೆಯಲು ಮತ್ತು ಸರಿಯಾಗಿ ಹಾಲು ಬರಲು. ಹಾಲು ಹಿಂಡುವದಕ್ಕೆ ಮುಂಚೆ ಕೆಚ್ಚಲನ್ನು ತೊಳೆಯುವುದು ಬಹು ಮುಖ್ಯ.

ರಾಜಾ ರಂತೀದೇವನ ದಾತತ್ವ

[ಮುಂದುವರಿದದ್ದು]

ಒಂದಾನೊಂದು ಸಮಯದಲ್ಲಿ ರಂತೀದೇವನಿಗೂ ಅವನ ಮನೆಯವರಿಗೂ ಆಹಾರ ದೊರೆಯದೇ 48 ದಿನಗಳವರೆಗೆ ಹಸಿದುಕೊಂಡಿರಬೇಕಾಯಿತು : ಅದರ ನಂತರದ ದಿನ ದೈವಯೋಗದಿಂದ ಸ್ವಲ್ಪ ಪಾಯಸ ಮತ್ತು ಭಕ್ಷಣಗಳು ದೊರೆತವು.

ಎಲ್ಲರೂ ಸ್ನಾನಾದಿಗಳನ್ನು ಮಾಡಿಕೊಂಡು, ಇದ್ದ ಆಹಾರವನ್ನು ಮನೆಯ ಎಲ್ಲರೂ ಹಂಚಿಕೊಂಡರು. ಆ ವೇಳೆಗೆ ಸರಿಯಾಗಿ ಒಬ್ಬ ಬ್ರಾಹ್ಮಣನು ಅತಿಥಿಯಾಗಿ ಬಂದನು. ಆ ಬ್ರಾಹ್ಮಣನು ರಂತೀದೇವನಿಗೆ ಸಾಕ್ಷಾತ್ ಪರಮಾತ್ಮನಂತೆಯೇ ಕಾಣುತ್ತಿದ್ದನು. ರಾಜನು ಕೂಡಲೇ ಎದ್ದು ಅತಿಥಿಗೆ ಸಲ್ಲಿಸಬೇಕಾದ ಆ ಪ್ರೌಢ್ಯ ಪಾದ್ಯಾಚಮನಗಳನ್ನು ನೀಡಿ ಗೌರವಿಸಿದನು. ನಂತರ ತಮ್ಮಲ್ಲಿದ್ದ ಆಹಾರದ ಸ್ವಲ್ಪ ಭಾಗವನ್ನು ಆತನಿಗೆ ಕೊಟ್ಟು ತೃಪ್ತಿಪಡಿಸಿದನು.

ಆ ಬ್ರಾಹ್ಮಣನು ಹೋದನಂತರ ಮಿಕ್ಕ ಆಹಾರವನ್ನೇ ಎಲ್ಲರೂ ಹಂಚಿಕೊಂಡು, ಊಟಕ್ಕೆ ಕೂರಬೇಕೆನ್ನುವಷ್ಟರಲ್ಲಿ ಒಬ್ಬ ಶೂದ್ರನು ಒಂದು ಆಹಾರವನ್ನು ಯಾಚಿಸಿದನು. ರಂತೀದೇವನು ತನ್ನಲ್ಲಿದ್ದ ಆಹಾರದಲ್ಲಿ ಒಂದು ಭಾಗವನ್ನು ಆತನಿಗೆ ಕೊಟ್ಟು ಕಳಿಸಿದನು.

ಸ್ವಲ್ಪ ಹೊತ್ತಿನ ನಂತರ ಮತ್ತೊಬ್ಬ ಶೂದ್ರನು ತನ್ನ ನಾಲ್ಕು ನಾಯಿಗಳೊಡನೆ ಬಂದು ಹಸಿದಿರುವ ನಾಯಿಗಳಿಗೆ ಆಹಾರವನ್ನು ಬೇಡಿದನು. ರಂತೀದೇವನು ಉಳಿದಿರುವ ಆಹಾರವನ್ನು ಭಯಭಕ್ತಿಗಳಿಂದ ಆ ನಾಯಿಗಳಿಗೆ ಕೊಟ್ಟನು. ಅವು ಸಾಕ್ಷಾತ್ ಪರಮಾತ್ಮನಂತೆಯೇ ಅವನಿಗೆ ಕಾಣಿಸಿದವು.

ಈಗ ಒಂದು ತಂಬಿಗೆ ನೀರು ಮಾತ್ರ ಉಳಿದಿದ್ದಿತು. ಅದೂ ಕೂಡ ಒಬ್ಬರಿಗೆ ಆಗುವಷ್ಟು ಮಾತ್ರಾ ಇತ್ತು. ಅವರೆಲ್ಲರೂ ಅದನ್ನೇ ಹಂಚಿಕೊಂಡು ಕುಡಿಯಬೇಕೆನ್ನುವಷ್ಟರಲ್ಲಿ ಒಬ್ಬ ಚಂಡಾಲನು ಬಂದು, ತನ್ನ ದಾಹಶಾಂತಿಗಾಗಿ ನೀರನ್ನು ಬೇಡಿದನು.

ರಂತೀದೇವನು ಆತನನ್ನು ಕಂಡು ಕನಿಕರಪಟ್ಟು ಎಲ್ಲಾ ನೀರನ್ನೂ ಆತನಿಗೆ ನೀಡಿ, ಸೃಷ್ಟಿಕರ್ತನಲ್ಲಿ ಈ ರೀತಿ ಪ್ರಾರ್ಥನೆ ಮಾಡಿದನು—

ನಕಾಮಯೇಽಹಂಗತಿಮೀಶ್ವರಾತ್ ಪರಾಮಷ್ಟರ್ದಿಯುಕ್ತಾಮಪುನರ್ಭವಂವಾ ।
ಆರ್ತಿಂಪ್ರಪದ್ಯೇಽಖಿಲದೇಹಭಾಜಾಮಂತಃಸ್ಥಿತೋಯೇನಭವಂತ್ಯದುಃಖಾಃ ॥

' ನಾನು ಪರಮಾತ್ಮನಿಂದ ಅಷ್ಟಾಂಗಯೋಗದಿಂದ ಲಭಿಸುವ ಅಣಿಮಾದಿ ಸಿದ್ಧಿಗಳನ್ನಾಗಲೀ, ಪುನರ್ಜನ್ಮವಿಲ್ಲದ ಮೋಕ್ಷವನ್ನಾಗಲೀ ಅಪೇಕ್ಷಿಸುವುದಿಲ್ಲ ; ಎಲ್ಲಾ ಜೀವಿಗಳ ಹೃದಯವಲ್ಲಿದ್ದು ಎಲ್ಲರ ದುಃಖವನ್ನೂ ನಾನು ಅನುಭವಿಸುವಂತಾಗಿ ಅದರಿಂದ ಎಲ್ಲಾ ಜೀವಿಗಳೂ ದುಃಖದಿಂದ ಬಿಡುಗಡೆ ಹೊಂದಲೆಂಬುದೇ ನನ್ನ ಪ್ರಾರ್ಥನೆ ".

[ಅ. ನ. ಅಯ್ಯಂಗಾರ್]

———

ಗೋ ಹತ್ಯೆ

ಭಾರತ ಗೋಸೇವಾ ಸಂಘದ ಅಧ್ಯಕ್ಷ ಶ್ರೀ ಯು ಎಡ್ಗಾರ್ ಮತ್ತು ಪಾರ್ಲಿಮೆಂಟು ಸದಸ್ಯ ಶ್ರೀ ಕನುಲನಯನ ಬಜಾಜ್‌ರವರು, ಕಲ್ಕತ್ತಾಕ್ಕೆ ಹೋಗಿದ್ದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಶ್ರೀ ಅಜಯ್ ಮುಖರ್ಜಿಯವರನ್ನು ಕಂಡು ಪಶ್ಚಿಮ ಬಂಗಾಳದಲ್ಲಿ 14 ವರ್ಷಕ್ಕೆಂತ ಕಡಮೆ ವಯಸ್ಸಿನ ಪಶುಗಳನ್ನು ಹತ್ಯೆ ಮಾಡಬಾರದೆಂಬ ಶಾಸನವಿದ್ದರೂ, ಪಶುವೈದ್ಯರು ಕೊಡುವ ದೌರ್ಬಲ್ಯ ಸರ್ಟಿಫಿಕೇಟುಗಳ ಆಧಾರದಮೇಲೆ, ಆ ವಯಸ್ಸಿಗಿಂತ ಕಡಮೆ ವಯಸ್ಸಿನ ಪಶುಗಳ ವಧೆಯಾಗುತ್ತಿರುವುದೆಂದೂ, ಅದಕ್ಕಾಗಿ ಯಾವುದಾದರೂ ಅಧಿಕೃತ ಸ್ವಯಂ ಸಂಸ್ಥೆಯಿಂದ ದೌರ್ಬಲ್ಯ ಸರ್ಟಿಫಿಕೇಟು ಬಿಲ್ಲದೆ ಯಾವ ಪ್ರಾಣಿಯ ವಧೆಯೂ ಆಗದಂತೆ ನೋಡಿಕೊಳ್ಳಬೇಕೆಂದೂ ಒತ್ತಾಯ ಮಾಡಿದರೆಂದೂ ಗೊತ್ತಾಗಿದೆ.

——

ಜಾಡರ ಹುಳು

ಕಲ್ಕತ್ತಾ— ವಿಶ್ವದಲ್ಲಿ 80000 ವಿವಿಧ ಜಾತಿಯ ಜಾಡರ ಹುಳುಗಳಿವೆಯೆಂದೂ ಇವೆಲ್ಲಾ ಮಾನವನಿಗೆ ಅಪಾಯಕಾರಿಯಾದ ಕ್ರಿಮಿಕೀಟಗಳನ್ನು ನುಂಗುತ್ತವೆಯೆಂದೂ ಪ್ರಾಣಿ ಸಂಬಂಧ ಸರ್ವೆಯಿಂದ ವ್ಯಕ್ತಪಟ್ಟಿದೆ.

●✶●

ಪುತ್ತಾಂಡ್ ಅಮೋಘ 8 ನೇ ವಾರ
ಶಿನ ಅಮೋಘ ಪ್ರಾರಂಭ

ನೋಡಿದವರೆಲ್ಲಾ ಮನಸಾರೆ ಪ್ರಶಂಸಿಸುತ್ತಿರುವ ಅತ್ಯಮೋಘ ಕನ್ನಡ ಚಿತ್ರ

ಗೆಜ್ಜೆ ಪೂಜೆ
ಜ

ನಟವರ್ಗ— ಕಲ್ಪನ, ಅಶ್ವತ್ಥ್, ಬಾಲಕೃಷ್ಣ, ಪಂಡರಿಬಾಯಿ
[ದಿನ 3 ಪ್ರದರ್ಶನಗಳು]

ಆಪೆರಾ— ಅಮೋಘ 3 ನೇ ವಾರ

.... ಅತ್ಯಮೋಘ ಹಿಂದಿ ಚಿತ್ರ ....

ಪಾರ್ ಹಿ ಪಾರ್
ಶೆ ಲ

ಪಾತ್ರ – ವೈಜಯಂತಿ ಮಾಲ ಧರ್ಮೇಂದ್ರ
ದಿನ 3 ಆಟಗಳು

Help The Gorakshana



Protect the Cow

ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ
ಗೋರಕ್ಷಣಕ್ಕೆ ಬೆಂಬಲ ನೀಡಿ

ಅಖಿಲ ಭಾರತದಲ್ಲಿ ಕೂಡಲೇ ಗೋವಧೆ ನಿಷೇಧವಾಗಲಿ

ಗೋರಕ್ಷಣಕ್ಕೆ ಚಂದಾ ಮತ್ತು ಡೊನೇಷನ್ ಪಾವತಿಮಾಡುವ ಅಡ್ರೆಸ್

1 ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರ ಸಭಾ
ಹೊಂಗನೂರು, ಚಾಮರಾಜನಗರ ತಾಲ್ಲೂ
2 ಶ್ರೀ ಬಿ ಜಿ ಶಾಸ್ತ್ರಿ, ಆಥರ್ ಮತ್ತು ಅಸ್ಸ್ಟಾಲಜರ್, 180 ನ್ಯೂ ಬ್ಲಾಕ್,
ವಿದ್ಯಾರಣ್ಯಪುರಂ, ಮೈಸೂರು.
3 ಡಾ ॥ ಪಿ ಎಸ್ ನಾರಾಯಣ್, ಮತ್ತು ಪಿ ಎಸ್. ವಿಶ್ವನಾಥ್,
ಪ್ರಾಣಿದಯಾ ಪ್ರಚಾರಕರು, 320 – 5 ನೆ ಬ್ಲಾಕ್, ಜಯನಗರ, ಬೆಂಗಳೂರು
4 ಗೋರಕ್ಷಣ ಆಫೀಸ್, ಸತ್ಯವಾದಿ ಪ್ರೆಸ್ ಚಾಮರಾಜಪುರಂ, ಮೈಸೂರು 4

Edited Printed Published by Dharmaprachara Nirata
M S Krishna Rao (Proprietor) at the Satyavadi Press
Chamarajapuram, Mysore 4